ಸಿಸಿ ನಂಃ 187/2023

ಸಿ.ಡಬ್ಲೂ 17/

ಪಿ.ಡಬ್ಲೂ 12

**4 ನೇ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ**

**ಧಾರವಾಡ.**

ಸಾಕ್ಷಿದಾರರ ಹೆಸರು ಃ ಶಂಕರ

ತಂದೆಯ ಹೆಸರು ಃ ವೀರಪ್ಪ ಮುತ್ತಲಗೇರಿ

ವಯಸ್ಸು ಃ 34 ವರ್ಷ

ಉದ್ಯೋಗ ಃ ಹೆಚ್ ಸಿ ಕಲಘಟಗಿ ಪೋಲಿಸ ಠಾಣೆ

ವಾಸ ಸ್ಥಳ ಃ ಕಲಘಟಗಿ .

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ಃ **04.11.2025**

**ಮುಖ್ಯ ವಿಚಾರಣೆ ಃ ಮಾನ್ಯ ಹಿಸಸಅ ರವರಿಂದ**

ನಾನು ಜೂನ 2018 ರಿಂದ ಅಕ್ಟೊಬರ 2022 ವರೆಗೆ ಧಾರವಾಡ ಗ್ರಾಮೀಣ ಪೋಲಿಸ ಠಾಣೆಯಲ್ಲಿ ಹೆಚ್ ಸಿ ಯಾಗಿ ಕೆಲಸ ಮಾಡಿರುತ್ತೇನೆ.

ನಮ್ಮ ಠಾಣಾ ವ್ಯಾಪ್ತಿಯಲ್ಲಿ ದಿಃ 08.02.2022 ರಂದು ಹಿಟ್ ಆ್ಯಂಡ್ ರನ್ ಕೇಸ್ ಆಗಿದ್ದು ಈ ಬಗ್ಗೆ ನನ್ನ ಮೇಲಾಧಿಕಾರಿ ದಿಃ 15.02.2022 ರಂದು ಸದರಿ ಅಪಘಾತದಲ್ಲಿ ಭಾಗಿಯಾದ ವಾಹನ ಹಾಗೂ ಚಾಲಕನನ್ನು ಪತ್ತೆ ಮಾಡಲು ನೇಮಕ ಮಾಡಿರುತ್ತಾರೆ. ಆ ಪ್ರಕಾರ ನಾನು ಇನಾಮಹೊಂಗಲ ಮತ್ತು ಮರೆವಾಡ ಹತ್ತಿರ ಸಿಸಿಟಿವಿ ಫೂಟೇಜ ತೆಗೆದುಕೊಂಡು ಬರಲು ಹೇಳಿರುತ್ತಾರೆ. ನಂತರ ಇನಾಮಹೊಂಗಲಗೆ ಹೊಗಿ ಪಿಡಿಓ ರವರಿಗೆ

ಸಿಸಿ ನಂಃ 187/2023
ಸಿ.ಡಬ್ಲೂ 17/
ಪಿ.ಡಬ್ಲೂ 12

ಪತ್ರ ಕೊಟ್ಟು ಸದರಿ ಸಿಸಿಟಿವಿ ಫೂಟೇಜ ಪರಶೀಲನೆ ಮಾಡಿದಾಗ ದಿಃ 08.02.2022 ರಂದು ರಾತ್ರಿ 9.00-11.00 ಅವಧಿಯಲ್ಲಿ ಸಿಸಿಟಿವಿ ಫೂಟೇಜ ನೊಡಿದಾಗ ಒಂದು ಬುಲೇರೊ ವಾಹನ ಜಖಂ ಆಗಿರುವುದು ಕಂಡು ಬಂದಿರುತ್ತದೆ. ನಂತರ ಕಾರ್ಯದರ್ಶಿ ರವರು ಸದರಿ ಸಿಸಿಟಿವಿ ಫೂಟೇಜ ನ್ನು ಒಂದು ಸಿಡಿಯಲ್ಲಿ ಹಾಕಿ ಕೊಡುತ್ತಾರೆ. ಈ ಬಗ್ಗೆ ಅವರು ವರದಿಯನ್ನು ಸಹ ಕೊಟ್ಟಿರುತ್ತಾರೆ. ನಂತರ ಕಾರ್ಯದರ್ಶಿ ರವರು ಕಲಂ.65(ಬಿ) ರಡಿ ಪ್ರಮಾಣ ಪತ್ರ ವನ್ನು ಸಹ ಕೊಟ್ಟಿರುತ್ತಾರೆ. ಸದರಿ ಸಿಡಿ ಹಾಗೂ ದಾಖಲೆಗಳನ್ನು ತೆಗೆದುಕೊಂಡು ನಾನು ನಮ್ಮ ತನಿಖಾಧಿಕಾರಿಗೆ ನೀಡಿರುತ್ತೇನೆ. ಈ ಬಗೆಗ ನಾನು ವರದಿಯನ್ನು ಸಹ ನೀಡಿರುತ್ತೇನೆ.

ದಿಃ 15.02.2022 ರ ಮೆಮೊವನ್ನು **ನಿಪಿ.20** ಎಂದು , ಸಾಕ್ಷಿ ಸಹಿ **ನಿಪಿ.20(ಎ)** ಎಂದು ಗುರುತಿಸಲಾಯಿತು. ದಿಃ 15.02.2022 ರ ವರದಿಯನ್ನು **ನಿಪಿ.21** ಎಂದು , ಸಾಕ್ಷಿ ಸಹಿ **ನಿಪಿ.21(ಎ)** ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದ**

1. ನನ್ನ ಮೇಲಾಧಿಕಾರಿ ನನಗೆ ಯಾವದೇ ಆದೇಶ ನೀಡಿಲ್ಲ ಸದರಿಯವರ ಅದೇಶದಂತೆ ನಾನು ಯಾವದೇ ಸ್ಥಳಕ್ಕೆ ಬೇಟಿ ನೀಡಿಲ್ಲ ಹಾಗೂ ಸಿಡಿ , ಕಲಂ.65 ಬಿ ಪ್ರಮಾಣ

ಸಿಸಿ ನಂಃ 187/2023
ಸಿ.ಡಬ್ಲೂ 17/
ಪಿ.ಡಬ್ಲೂ 12

ಪತ್ರ ತಂದು ತನಿಖಾಧಿಕಾರಿ ಮುಂದೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ.21 ಸಹಾಯ ಮಾಡಲು ಸುಳ್ಳು ವರದಿ ನೀಡಿದ್ದೆನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

**( ಆನಂದ ಎಸ್ ಕರಿಯಮ್ಮನವರ್)**
4 ನೇ ಹಿ ದಿ ನ್ಯಾ ಹಾಗೂ ಜೆಎಂಎಫ್‌ಸಿ,
ಧಾರವಾಡ.